Impact Factor (QJIF): 8.47 E-ISSN: 2583-1615, P-ISSN: 3049-3498




**Received**: 11/November/2025 **IJRAW:** 2026; 5(1):08-10 **Accepted:** 20/December/2025

# ಕುಮಾರವ್ಯಾಸನ ಭಾರತ ಕಾವ್ಯದಲ್ಲಿ ದುರಂತ ಕರ್ಣನ ಚಿತ್ರಣ

**[*1]ಡಾ. ಅಮೃತಿ ರಾಜೇಶ್**

[*1]ಪ್ರಾಂಶುಪಾಲರು, ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು ಕೃ. ರಾ ರಸ್ತೆ, ಬೆಂಗಳೂರು, ಭಾರತ.

**ಸಾರಾಂಶ**

ಮಹಾಭಾರತಕಾವ್ಯದಲ್ಲಿ ಕರ್ಣನ ವ್ಯಕ್ತಿತ್ವವೇ ಸಂಕೀರ್ಣವಾದುದು. ಕವಿಯ ಮನೋಧರ್ಮದ ಸೂಕ್ಷ್ಮತೆಗೆ ಇಂಥ ಮಾತುಗಳು ಒಗ್ಗುವುದಿಲ್ಲವೇನೋ? ತನ್ನನ್ನು ತಾನೇ ಸಂಕಟದಲ್ಲಿ ಸಿಲುಕಿಸಿಕೊಳ್ಳುವ ಕರ್ಣನು ಬದುಕು ವಿಚಿತ್ರ ತೊಳಲಾಟದಲ್ಲಿರುವುದು ಗೋಚರಿಸುತ್ತದೆ. ತನ್ನ ವಿಚಾರದಲ್ಲಿ ನಂಬಿಕೆಯನ್ನು ಮೀರಿ ಬದಲಾಗುತ್ತಿರುವ ಸನ್ನಿವೇಶಗಳಿಗೆ ಆತ ಒಳಗಾಗುತ್ತಾನೆ. ಇಂಥ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಕರ್ಣನನ್ನು ವಿಚಾರ ಮಾಡದೇ ಇರುವ ಅವಿವೇಕ ಎನ್ನುವುದೇ ಅಥವಾ ಪರಿಸರದ ಒತ್ತಡಗಳಲ್ಲಿ ಕಾರಣ ಹುಡುಕಬೇಕೆ ಇಲ್ಲವಾದರೆ ಪಾತ್ರದ ಮನಸ್ಥಿತಿ ಮತ್ತು ಪರಿಸರದ ಒತ್ತಡಗಳನ್ನು ಸಂಧಿಸಿ ಅರ್ಥಗಳನ್ನು ಕಂಡುಕೊಳ್ಳುವ ಸಾಧ್ಯತೆಗಳು ಹಾಗೂ ಆಲೋಚನೆಗಳು ಸಾಕಷ್ಟಿವೆ.

ಕುವೆಂಪುರವರು ತನ್ನ 'ಕುಮಾರವ್ಯಾಸನ ದುರಂತ ಕರ್ಣ' ಲೇಖನದಲ್ಲಿ ಕುವೆಂಪು ಅವರ ಕರ್ಣ ದುರಂತ ವ್ಯಕ್ತಿ. ಕುಮಾರವ್ಯಾಸನ ಕರ್ಣನೂ ದುರಂತವ್ಯಕ್ತಿ ಎನ್ನುತ್ತಾರೆ. ಅಂದರೆ 'ತುದಿಯಲ್ಲಿ ಆದ ಅನ್ಯಾಯದಿಂದ ಆತ ಅಕಾಲ ಮೃತ್ಯುವಿಗೆ ತುತ್ತಾದ ಜೀವ' ಎನ್ನುತ್ತಾರೆ. 'ಮಿತ್ರನ ಮೇಲ್ಮೆಗಾಗಿ ಮೂರು ಲೋಕಗಳೂ ಮೆಚ್ಚುವಂತೆ ಶ್ರೀಕೃಷ್ಣ, ಅರ್ಜುನರಂತಹ ಪ್ರತಿವೀರರ ಸಮ್ಮುಖದಲ್ಲಿ ಹೋರಾಡಿ ಕೊನೆಗೆ ತನ್ನ ಹೃದಯ ದೌರ್ಬಲ್ಯವೂ ತಂದೊಡ್ಡಿದ ಅನಾರ್ಯ ಅನ್ಯಾಯಕ್ಕೆ ತುತ್ತಾದ ಕರ್ಣನ ಅಂತ್ಯ ಅಮಂಗಳಕರವೂ ಅಲ್ಲ, ದುರಂತ ವ್ಯಕ್ತಿಯೂ ಅಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಹೀಗೆ ಕರ್ಣನ ಹಿನ್ನೆಲೆಯನ್ನು ನೋಡಿದರೆ ಆತನೇನು ಮೊದಲು ಉನ್ನತಸ್ಥಿತಿಯಲ್ಲಿದ್ದವನಲ್ಲ. ಸೂತ ಪುತ್ರತ್ವದಿಂದ ಕ್ಷತ್ರಿಯತ್ವಕ್ಕೆ ಏರಿ, ಅಂಗಾಧಿಪತಿಯಾಗಿ ತನ್ನ ಕೀರ್ತಿಯ ಪ್ರಚಂಡ ಜ್ಯೋತಿಯು ಪ್ರಜ್ವಲಿಸುತ್ತಿರುವಾಗಲೇ ಆ ಜ್ವಾಲೆಯ ನಟ್ಟನಡುವೆ ಭಸ್ಮೀಭೂತನಾದ ವ್ಯಕ್ತಿ. ಆತನ ದೋಷವೆಂದರೆ ಗುಣದ ದೌರ್ಬಲ್ಯ. ಏಕೆಂದರೆ ದಾನದ ಹೆಸರಿನಲ್ಲಿ ತನ್ನ ಜೀವನವನ್ನೇ ತ್ಯಜಿಸಿದವನು. ಕರ್ಣನು ದುರಂತ ವ್ಯಕ್ತಿಯಲ್ಲ. ಅದೃಷ್ಟ, ಕರ್ಮಫಲ, ವಿಧಿಲೀಲೆ. ಮಹಾಭಾರತದಲ್ಲಿ ಬರುವ ವ್ಯಕ್ತಿಗಳ ಗುಣಕಥನಗಳು ಅದರ ಕಾರಣಕಾರ್ಯಗಳನ್ನು ವಿಮರ್ಶಿಸಬೇಕಾದರೆ ಸಮಷ್ಟಿದೃಷ್ಟಿಯಿಂದ ಚ್ಯುತರಾಗಿ ಬಿಡಬಾರದು. ಸಮಸ್ತ ಮಹಾಭಾರತದ ಅಂತರಾಳದಲ್ಲಿ ಗುಪ್ತಗಾಮಿನಿಯಂತೆ ಹರಿಯುತ್ತಿರುವ ಅದೃಷ್ಟಶಕ್ತಿ. ಕೃಷ್ಣನನ್ನು ಹೊರತುಪಡಿಸಿದರೆ ಉಳಿದೆಲ್ಲ ಪಾತ್ರಗಳು ಈ ಪ್ರವಾಹದಲ್ಲಿ ಕೊಚ್ಚಿಹೋದವರೇ ಆಗಿದ್ದಾರೆ. ಹಾಗಾಗಿ ವ್ಯಾಸಭಾರತದಿಂದ ಇಲ್ಲಿಯವರೆಗೆ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಧಮ್ದ ವಿವಿಧ ಲೇಖಕರ ದೃಷ್ಟಿಯಲ್ಲಿ ಮೂಡಿಬಂದಿರುವ ಕರ್ಣನ ವ್ಯಕ್ತಿತ್ವ ಹಾಗೂ ಅವನ ದುರಂತದ ಬಗ್ಗೆ ವಿಮರ್ಶಕರ ಅಭಿಪ್ರಾಯಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ಪ್ರಮುಖ ಪದ:** ರಾಜಪ್ರಭುತ್ವ, ಮೋಸ (ಕುತಂತ್ರ), ತ್ಯಾಗ, ಸ್ವಾರ್ಥ, ಅಧಿಕಾರ.

## ಪರಿಚಯ

ಕನ್ನಡದಲ್ಲಿ ರಚಿತವಾದ ಭಾರತಗಳಲ್ಲಿ ಬಹಳ ಚರ್ಚೆಗೆ ಒಳಗಾದ ಮತ್ತು ಸೂಕ್ಷ್ಮ ಸಂಶೋಧನೆಗೆ ದಕ್ಕಿದ ಪ್ರಮುಖ ಪಾತ್ರ ಎಂದರೆ ಅದು 'ಕರ್ಣ'ನ ಪಾತ್ರ. ಕುಮಾರವ್ಯಾಸಭಾರತದಲ್ಲಿನ ಪಾತ್ರಗಳ ಬಗ್ಗೆ ಬಹಳಷ್ಟು ವಿಮರ್ಶಕರು ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವೇದಪುರಾಣಗಳಲ್ಲಿ ಮೊದಲು ಮಾತೃದೇವೋಭವ ಆಮೇಲೆ ಪಿತೃದೇವೋಭವ ಎಂಬ ಮಾತು ಉಲ್ಲೇಖಿತವಾಗಿದೆ. ಕರ್ಣನ ಬಗ್ಗೆ ಕುವೆಂಪುರವರು ಹೇಳಿರುವ ಮಾತನ್ನು ಇಲ್ಲಿ ಸ್ಮರಿಸಬೇಕು "ಇಲ್ಲಿನ ಪಾತ್ರಗಳು ಜೀವತುಂಬಿ ತುಳುಕುವಂತಿವೆ. ಕೋಪ ಬಂದರೆ ಹೊಡೆದೇ ಬಿಡುವರು. ದುಃಖವಾದರೆ ಅತ್ತೇ ಬಿಡುವರು. ಕರುಣೆ ಮೂಡಿದರೆ ಎದೆಗೊರಗಿಬಿಡುವರು. ಆತನ ಪಾತ್ರಗಳಿಗೆ ಹೆಚ್ಚು ಸಂಯಮ ಶಕ್ತಿಯಿಲ್ಲ. ಆದರೆ ಶಕ್ತಿ ಬೇಕಾದಷ್ಟಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಭಾಗವತರಾಟದ ಧಿಮಿಧಿಮಿ ಕುಣಿತ. ಅಲ್ಲೂ ನಯ, ಸೂಕ್ಷ್ಮತೆ ಲಲಿತರುಚಿಗಳು ಮಿಂಚಬಹುದು" [1] ಎಂದು ಅಭಿಪ್ರಾಯಪಡುತ್ತಾರೆ.

ಕುಮಾರವ್ಯಾಸ ಅವನೊಬ್ಬ ಭಕ್ತ ಕವಿ. "ನಾರಣಪ್ಪನಿಗೆ ಭಕ್ತಿಯೇ ಪ್ರಧಾನ ರಸವಾಗಿರುವುದರಿಂದ, ಧರ್ಮವೇ

***Corresponding Author:** ಡಾ. ಅಮೃತಿ ರಾಜೇಶ್

ಮುಖ್ಯವಾಗಿರುವುದರಿಂದ ಭಗವಂತ ಅವನ ಕಥಾನಾಯಕನಾಗಿರುವುದರಿಂದ ಶತ್ರು ಪಕ್ಷದಲ್ಲಿರುವ ಕರ್ಣನ ಪಾತ್ರವನ್ನು ಪಂಪನಂತೆ ಔನ್ನತ್ಯಕ್ಕೆ ಏರಿಸಲು ಸಾಧ್ಯವಿಲ್ಲ" [2] ಎನ್ನುತ್ತಾರೆ ಕುವೆಂಪುರವರು. ಹಾಗಾಗಿ ತನ್ನ ಕಾವ್ಯದಲ್ಲಿ ಅವನೇ ಕಥಾನಾಯಕ. ಆದರೂ ತನ್ನ ಕಾವ್ಯದ ಭೂಮಿಕೆಯಲ್ಲಿ ಪ್ರತಿಪಕ್ಷದವರನ್ನು ಮೇಲೇರಿಸಬೇಕಾದರೆ ಪ್ರತಿನಾಯಕರನ್ನು ಎಷ್ಟರಮಟ್ಟಿಗೆ ಮೇಲೆತ್ತಬೇಕೋ ಅಷ್ಟರಮಟ್ಟಿಗೆ ಮಾತ್ರ ಕರ್ಣನನ್ನು ಮೇಲೇರಿಸಿ, ಆತನಿಗೆ ದೊರಕಬೇಕಾದ ಸ್ಥಾನ –ಮಾನಗಳು ದೊರೆಯುವಂತೆ ಮಾಡುವಲ್ಲಿ ಯಶಸ್ವಿಯಗುತ್ತಾನೆ.

ಕನ್ನಡದಲ್ಲಿ ಕೆಲವು ವಿಮರ್ಶಕರು ಕರ್ಣನ ಪಾತ್ರ ಬಗ್ಗೆ ಸಾತ್ವಿಕ ಚರ್ಚೆಗೆ ಒಳಪಡಿಸಿರುವುದನ್ನು ಗಮನಿಸಬಹುದು. ಅಂತಹ ಚರ್ಚೆಗಳಲ್ಲಿ ಶಂಬಾ ಜೋಷಿಯವರ 'ಕರ್ಣನ ಮೂರು ಚಿತ್ರಗಳು' ಲೇಖನದಲ್ಲಿ ಕರ್ಣನ ಪಾತ್ರದ ಬಗ್ಗೆ ಆಕ್ಷೇಪಗಳನ್ನು ಹೊರಹಾಕುತ್ತಿರುವುದನ್ನು ಕಾಣಬಹುದು. "ಜೋಳವಾಳಿಯನ್ನು ನೆನೆದವನು, ಒಡೆಯನಿಗೆ ವಿಶ್ವಾಸಘಾತ ಮಾಡದೆ ಆಳ್ದನ ಹಿತಕ್ಕಾಗಿ ತನ್ನ ದೇಹವನ್ನೇ ಈಡಾಡಿದವನೆಂದು ಕರ್ಣನ ಬಗ್ಗೆ ಬಹಳಷ್ಟು ವಿಮರ್ಶಕರು ಬಹಳ ಮೆಚ್ಚುಗೆಯ ಮಾತನ್ನಾಡಿರುವದನ್ನು ಗಮನಿಸಬಹುದು. ಇದು ವ್ಯಾಸಭಾರತ ಹಾಗೂ ತದನಂತರ ಬಂದ ಭಾರತಗಳಲ್ಲಿ ಬಂದ ಮಾತು. ಆದರೆ, ಇದೇ ರೀತಿಯ ಕರ್ಣನ ವ್ಯಕ್ತಿತ್ವವನ್ನು ಕುಮಾರವ್ಯಾಸ ಭಾರತದಲ್ಲಿ ಕಾಣುವುದು ಕಡಿಮೆ. ಕುಮಾರವ್ಯಾಸ ಭಾರತದೊಳಗಿನ ಕರ್ಣನ ಪಾತ್ರದ ರಚನೆಯಲ್ಲಿ ಇಂತಹ ವಿಸಂಗತಿ ಏಕೆ ಉಂಟಾಯಿತೆಂಬ" [3] ಶಂಬಾ ಜೋಷಿಯವರ ತಕರಾರು ವ್ಯಕ್ತಪಡಿಸುತ್ತಾರೆ.

"ಕೃಷ್ಣ ಹಾಗೂ ಕುಂತಿಗೆ ಮಾತು ಕೊಡುವ ಕರ್ಣ ಹೇಗೆ ಕೌರವನಿಷ್ಠನಾಗುತ್ತಾನೆ. ಅವನನ್ನು ಕೃತಜ್ಞ, ಪ್ರಾಮಾಣಿಕನೆಂದು ಹೇಳಲು ಹೇಗೆ ಸಾಧ್ಯ. ಜೋಳವಾಳಿಗೆ ಋಣಿಯಾಗಿರುವ ಕರ್ಣ ತಾನು ಏನು ಮಾಡುತ್ತಿರವೆನೆಂಬ ಆಮೂಲಾಗ್ರ ವಿಚಾರಿಯಾಗಿರದೆ ಮತಿಹೀನನಾಗಿ ಎಲ್ಲರನ್ನು ಮೆಚ್ಚಿಸುವ ಗುಣವನ್ನು ಮೆರೆಯಬೇಕು ಎಂಬ ನಿಲುವುಳ್ಳವನಾಗಿರಬೇಕು. ಇಲ್ಲದೇ ಹೋದಲ್ಲಿ ಅವನು ತಾನು ಕೀಳು ಎಂಬ ಮನೋಗುಣದಿಂದ ಕೂಡಿರುವ ವ್ಯಕ್ತಿಯಾಗಿರಬೇಕೆಂದೇ ಹೇಳಬೇಕಾಗುತ್ತದೆ" [4] ಎಂಬ ನಿರ್ಧಾರಕ್ಕೆ ಬರುತ್ತಾರೆ.

ಕುಮಾರವ್ಯಾಸನು ತಾನು ಕರ್ಣನ ಪಾತ್ರವನ್ನು ನಿರ್ಮಿಸುವಾಗ ಅಲೌಕಿಕದ ಶ್ರೀಕೃಷ್ಣ ಲೌಕಿಕದಲ್ಲಿ ಲೌಕಿಕದಲ್ಲಿ ತನ್ನ ಸಾಮರ್ಥ್ಯವನ್ನು ಲೋಕಕ್ಕೆಲ್ಲ ಪ್ರಸರಿಸಬೇಕೆಂಬ ನಿಲುವುಳ್ಳವನಾಗಿರುತ್ತಾನೆ. ಹಾಗಾಗಿ ಶ್ರೀಕೃಷ್ಣನ ಮಹಿಮೆಯಿಂದ ಕರ್ಣನಿಗೆ ತಾನು 'ಪಾಂಡವರ ನೋಯಿಸೆ'ನೆಂದು ಮಾತು ಕೊಡುವಾಗ ತನ್ನ ಒಡೆಯನಿಗೆ ಕೇಡು ಬಗೆಯುತ್ತಿರುವನೆಂಬ ಸಾಮಾನ್ಯ ತಿಳುವಳಿಕೆಯುಳ್ಳವನಾಗಿರಬೇಕಾಗಿತ್ತು. ಆದರೆ ಕರ್ಣ ಸ್ವಾಮಿನಿಷ್ಠೆಯುಳ್ಳವನು ಹೀಗೇಕೆ ತನ್ನ ವಿವೇಕಶೂನ್ಯನಾದ ಎಂಬ ಬಗ್ಗೆ ಯೋಚಿಸಲೇ ಬೇಕಾಗುತ್ತದೆ.

ಕುಮಾರವ್ಯಾಸ ಭಕ್ತಿಯುಗದ ಕಾಲವಾದ್ದರಿಂದಲೋ, ಧರ್ಮವನ್ನು ಸ್ಥಾಪಿಸುವ ಉದ್ದೇಶವಿದ್ದುದರಿಂದಲೋ ಏನೋ ಲೋಕಕ್ಕೆ ಮಾತೃಭಕ್ತಿಯ ಉಪದೇಶ ಮಾಡುವುದರಿಂದಲೋ ಕುಮಾರವ್ಯಾಸನು ಈ ಪ್ರಸಂಗವನ್ನು ಕುಂತಿಗೆ ಮಾತು ಕೊಡುವ ಪ್ರಸಂಗವಾಗಿ ಚಿತ್ರಿಸಿರಬೇಕು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

ಕುಮಾರವ್ಯಾಸನು ಕಾವ್ಯಾಲೋಚನೆಯ ಜೊತೆಗೆ ಭಕ್ತಿ ಮಾರ್ಗದ ಮೂಲಕ ದೈವಿಕ ಭಾವನಾ ಧೋರಣೆಯನ್ನುಳ್ಳವನಾಗಿದ್ದಾನೆ. ಪರಮಾತ್ಮನು ತನ್ನ ಭಕ್ತರನ್ನು ಉದ್ಧರಿಸಿ ಅವರಿಗೆ ಮುಕ್ತಿಯನ್ನು ಕರುಣಿಸುವ ಶಕ್ತಿ ಎಂಬುದನ್ನು ಈ ಕಾವ್ಯದ ಮೂಲಕ ಲೋಕಕ್ಕೆ ಸಾರುತ್ತಾನೆ. ಕುಮಾರವ್ಯಾಸನ ಈ ಮನೋಭಾವವು ಆತ ಮಾಡುವ ಕೆಲವು ಸಂಗತಿಗಳು, ಸಂಭಾಷಣೆಗಳು, ಹಾಗೂ ಸಂದರ್ಭಗಳಿಂದ ತಿಳಿದುಬರುತ್ತದೆ.

ಹೀಗೆ ಒಂದು ಪಾತ್ರ ಎರಡು ವಿರುದ್ಧ ಕಾರ್ಯಗಳನ್ನು ಕೈಗೊಂಡಾಗ ಅದರ ಪಾವಿತ್ರ್ಯ ಹಾಗೂ ಮೌಲ್ಯಕ್ಕೆ ಕುಂದುಂಟಾಗುತ್ತದೆ ಎಂಬುದು ಶಂಬಾ ಅವರ ನಿಲುವು. ಭಿನ್ನವಾಗಿ ಸೃಷ್ಟಿಗೊಂಡ ಪಾತ್ರಗಳ ಹಿಂದೆ ಒಂದು ಸಂಕೀರ್ಣ ಚಲನೆ ಇರುವುದನ್ನು ಇವರು ಗಮನಿಸುವುದಿಲ್ಲ. ಇದಕ್ಕಾಗಿ ನಾವು ಶಂಬಾರವರು ಎತ್ತಿರುವ ತಕರಾರುಗಳ ಬಗ್ಗೆ ಸಂದೇಹಪಡುವ ಹಾಗಿಲ್ಲ. ಇದಕ್ಕೆ ಬೇರೊಂದು ರೀತಿಯಲ್ಲಿ ಸಮರ್ಥನೆಯನ್ನು ನೀಡುತ್ತಾ ವಿಕ್ರಮ ಮಿಸಾಜಿಯವರು 'ಕುಮಾರವ್ಯಾಸ ಮತ್ತು ಪಂಪರ ಕರ್ಣನನ್ನು ನೋಡಿದರೆ ಆತನು 'ಜೋಳದ ಪಾಳಿ'ಯನ್ನು ನೆನೆವವನೆಂದು ಹೇಳಲಾಗದು. ತಾನು ಮಾಡಿದ ಉಪಕಾರ ಬಂಧನಕ್ಕಿಂತಲೂ, ತೀರಾಹತ್ತಿರದ ರಕ್ತ ಸಂಬಂಧದ ಆಕರ್ಷಣೆ ಹೆಚ್ಚು ಬಲತ್ತರವಾದುದು ಎಂಬುದು ಕುಮಾರವ್ಯಾಸನ ಕರ್ಣನ ಪಾತ್ರ ರಚನೆಯಲ್ಲಿ ಕಾಣುತ್ತದೆ. ಇದು ಲೋಕ ವ್ಯವಹಾರದಲ್ಲಿ ಬರುವ ನಿಜ ಸನ್ನಿವೇಶ, ಕರ್ಣ ಪಾತ್ರದ ಮುಖಾಂತರವಾಗಿ ಕವಿ ಈ ರಕ್ತಸಂಬಂಧದ ಮಹತ್ವವನ್ನು ಸಾರಲು ಹೊರಟಿರಬಹುದು' ಎಂಬ ನಿಲುವಿಗೆ ಬರುತ್ತಾರೆ.

ಭಾರತಕಾವ್ಯದಲ್ಲಿ ಕರ್ಣನ ವ್ಯಕ್ತಿತ್ವವೇ ಸಂಕೀರ್ಣವಾದುದು. ಕವಿಯ ಮನೋಧರ್ಮದ ಸೂಕ್ಷ್ಮತೆಗೆ ಇಂಥ ಮಾತುಗಳು ಒಗ್ಗುವುದಿಲ್ಲವೇನೋ? ತನ್ನನ್ನು ತಾನೇ ಸಂಕಟದಲ್ಲಿ ಸಿಲುಕಿಸಿಕೊಳ್ಳುವ ಕರ್ಣನು ಬದುಕು ವಿಚಿತ್ರ ತೊಳಲಾಟದಲ್ಲಿರುವುದು ಗೋಚರಿಸುತ್ತದೆ. ತನ್ನ ವಿಚಾರದಲ್ಲಿ ನಂಬಿಕೆಯನ್ನು ಮೀರಿ ಬದಲಾಗುತ್ತಿರುವ ಸನ್ನಿವೇಶಗಳಿಗೆ ಆತ ಒಳಗಾಗುತ್ತಾನೆ. ಇಂಥ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಕರ್ಣನನ್ನು ವಿಚಾರ ಮಾಡದೇ ಇರುವ ಅವಿವೇಕ ಎನ್ನುವುದೇ ಅಥವಾ ಪರಿಸರದ ಒತ್ತಡಗಳಲ್ಲಿ ಕಾರಣ ಹುಡುಕಬೇಕೆ ಇಲ್ಲವಾದರೆ ಪಾತ್ರದ ಮನಸ್ಥಿತಿ ಮತ್ತು ಪರಿಸರದ ಒತ್ತಡಗಳನ್ನು ಸಂಧಿಸಿ ಅರ್ಥಗಳನ್ನು ಕಂಡುಕೊಳ್ಳುವ ಸಾಧ್ಯತೆಗಳು ಯಾವುವು? ತೊಟ್ಟ ಬಾಣವನ್ನು ಮತ್ತೆ ತೊಡಲಾರೆ ಎಂಬ ಕರ್ಣನ ಮಾತಿನ ಬಗ್ಗೆ ಸಂಶಯ ಹೊಂದಿರುವ ಶಂಬಾ ಅವರಿಗೆ ಮೋಸಗೈಯ್ದ ಅರ್ಜುನನ ಬಗ್ಗೆ, ಕೃಷ್ಣನ ಬಗ್ಗೆ ಆಕ್ಷೇಪಿಸುವುದಿಲ್ಲ.

ಕುಮಾರವ್ಯಾಸನ ಕರ್ಣನ ವ್ಯಕ್ತಿತ್ವದಲ್ಲಿ ಕರ್ಣನನ್ನೇ ಆಕ್ಷೇಪಿಸುವ ಇವರು ಕೃಷ್ಣನ ವ್ಯಕ್ತಿತ್ವದಲ್ಲಿ ಕಾಣುವ ಕುಂದಿಗೆ ಕುಮಾರವ್ಯಾಸನನ್ನು ಆಕ್ಷೇಪಿಸಿದ್ದಾರೆ. ಕುಮಾರವ್ಯಾಸ ಕರ್ಣ ಅರೆಜೀವನಾಗಿ ಉಸಿರಾಡುವ ವೇಳೆಯಲ್ಲಿ ಕುಂಡಲಗಳ ದಾನ ಬೇಡುವ ಹಾರುವನಾಗಿ ಕಾಣಿಸುವುದರಲ್ಲಿ ಆ ಪಾತ್ರಕ್ಕೆ ಕುಂದನ್ನು ಉಂಟುಮಾಡಿದ್ದಾನೆ.

ವಿಕ್ರಮಮಿಸಾಜಿಯವರು 'ಔಚಿತ್ಯ'ದ ಸಮರ್ಥನೆ ನೀಡುತ್ತಾ, "ಔಚಿತ್ಯವೇ ಆನಂದ, ಅದೇ ಸಾಹಿತ್ಯದ ಗುರಿ" ಎನ್ನುತ್ತಾರೆ. ಎಷ್ಟೋ ಸಲ ಸಾಹಿತ್ಯದಲ್ಲಿ ಈ ಔಚಿತ್ಯ – ಅನೌಚಿತ್ಯದ ಪ್ರಶ್ನೆಯೇ ಹುಸಿ ಎನಿಸುತ್ತದೆ. ಇದು ಓದುಗನ ನಂಬಿಕೆಯನ್ನು ಅವಲಂಬಿಸಿರುತ್ತದೆ. ಈ ಔಚಿತ್ಯ ಅನೌಚಿತ್ಯವೂ ಕೂಡ ಎಲ್ಲರೂ ಒಪ್ಪುವ ಸಾಧ್ಯತೆಯಿಲ್ಲ" ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಕುವೆಂಪುರವರು ತನ್ನ 'ಕುಮಾರವ್ಯಾಸನ ದುರಂತ ಕರ್ಣ' ಲೇಖನದಲ್ಲಿ ಕುವೆಂಪು ಅವರ ಕರ್ಣ ದುರಂತ ವ್ಯಕ್ತಿ. ಕುಮಾರವ್ಯಾಸನ ಕರ್ಣನೂ ದುರಂತವ್ಯಕ್ತಿ ಎನ್ನುತ್ತಾರೆ. ಅಂದರೆ 'ತುದಿಯಲ್ಲಿ ಆದ ಅನ್ಯಾಯದಿಂದ ಆತ ಅಕಾಲ ಮೃತ್ಯುವಿಗೆ ತುತ್ತಾದ ಜೀವ' ಎನ್ನುತ್ತಾರೆ. 'ಮಿತ್ರನ ಮೇಲ್ಮೆಗಾಗಿ ಮೂರು ಲೋಕಗಳೂ ಮೆಚ್ಚುವಂತೆ ಶ್ರೀಕೃಷ್ಣ, ಅರ್ಜುನರಂತಹ ಪ್ರತಿವೀರರ ಸಮ್ಮುಖದಲ್ಲಿ ಹೋರಾಡಿ ಕೊನೆಗೆ ತನ್ನ ಹೃದಯ ದೌರ್ಬಲ್ಯವೂ ತಂದೊಡ್ಡಿದ ಅನಾರ್ಯ ಅನ್ಯಾಯಕ್ಕೆ

ತುತ್ತಾದ ಕರ್ಣನ ಅಂತ್ಯ ಅಮಂಗಳಕರವೂ ಅಲ್ಲ, ದುರಂತ ವ್ಯಕ್ತಿಯೂ ಅಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕುವೆಂಪುರವರು ಕರ್ಣನನ್ನು ದುರಂತ ವ್ಯಕ್ತಿ ಎಂದು ಕರೆದ ಈ ಪರಿಕಲ್ಪನೆಯಲ್ಲಿ ಕೃತಿ ರಚನೆಯ ಕಾಲಕ್ಕೆ ನಮ್ಮಲ್ಲಿ ಈ ಪರಿಕಲ್ಪನೆ ಇಲ್ಲವೆಂತಲೂ, ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯ ಸಾಹಿತ್ಯದ ಸಂಸರ್ಗದಿಂದ ನಮ್ಮಲ್ಲಿ ಬಂದವುಗಳು ಎಂದು ಅಭಿಪ್ರಾಯಪಡುತ್ತಾರೆ.

ಕುವೆಂಪುರವರು 'ದುರಂತ ವ್ಯಕ್ತಿ' ಎನ್ನುವ ಪದವನ್ನು 'ಪಾತ್ರವೊಂದು ಮೊದಲು ಉನ್ನತಸ್ಥಿತಿಯಲ್ಲಿದ್ದು, ಯಾವುದಾದರೊಂದು ಅಲ್ಪದೋಷದಿಂದ ಅಥವಾ ಮಾನಸಿಕ ದುರ್ಬಲತೆಯಿಂದ ಅಥವಾ ಯಾವುದಾದರೊಂದು ಗುಣದ ಅತ್ಯಾಧಿಕ್ಯದಿಂದ ಕ್ರಮೇಣ ದೋಷಿಯಾಗಿ ಅಥವಾ ಶಕ್ತಿಹೀನವಾಗಿ ಕಷ್ಟ ಪರಂಪರೆಗಳಲ್ಲಿ ಸಿಕ್ಕಿ ಅಧೋಗತಿಗಿಳಿದು ಮರಣ ಹೊಂದುವ ವ್ಯಕ್ತಿ' ಎಂದು ನಿರ್ವಚಿಸುತ್ತಾರೆ. ಕಾವ್ಯಗಳಲ್ಲಿ ದುರಂತ ನಾಯಕರಲ್ಲಿ ಕಂಡುಬರುವ ದೋಷಗಳನ್ನು ಕುವೆಂಪುರವರು 'ಸಾಮಾನ್ಯವಾಗಿ ಅನಿಶ್ಚಯತೆ, ಸಂಶಯ, ಮರಣಕ್ಕೆ ಕಾರಣಗಳೆಂದರೆ ಆತ್ಮಹತ್ಯೆ ಅಥವಾ ಪಿತೂರಿ. ಆದರೆ ಜನ್ಮಾಂತರ ಕರ್ಮಫಲ ಮೊದಲಾದವುಗಳನ್ನು ಪಾಶ್ಚಿಮಾತ್ಯರು ನಂಬದಿರುವುದರಿಂದ ಅವರಿಗೆ ಪಾರ್ಥಿವ ಕಾರಣಗಳು ಬೇಕು.

ಕರ್ಣನ ಹಿನ್ನೆಲೆಯನ್ನು ನೋಡಿದರೆ ಆತನೇನು ಮೊದಲು ಉನ್ನತಸ್ಥಿತಿಯಲ್ಲಿದ್ದವನಲ್ಲ. ಸೂತ ಪುತ್ರತ್ವದಿಂದ ಕ್ಷತ್ರಿಯತ್ವಕ್ಕೆ ಏರಿ, ಅಂಗಾಧಿಪತಿಯಾಗಿ ತನ್ನ ಕೀರ್ತಿಯ ಪ್ರಚಂಡ ಜ್ಯೋತಿಯು ಪ್ರಜ್ವಲಿಸುತ್ತಿರುವಾಗಲೇ ಆ ಜ್ವಾಲೆಯ ನಟ್ಟನಡುವೆ ಭಸ್ಮೀಭೂತನಾದ ವ್ಯಕ್ತಿ. ಆತನ ದೋಷವೆಂದರೆ ಗುಣದ ದೌರ್ಬಲ್ಯ. ಏಕೆಂದರೆ ದಾನದ ಹೆಸರಿನಲ್ಲಿ ತನ್ನ ಜೀವನವನ್ನೇ ತ್ಯಜಿಸಿದವನು. ಕರ್ಣನು ದುರಂತ ವ್ಯಕ್ತಿಯಲ್ಲ. ಅದೃಷ್ಟ, ಕರ್ಮಫಲ, ವಿಧಿಲೀಲೆ. ಮಹಾಭಾರತದಲ್ಲಿ ಬರುವ ವ್ಯಕ್ತಿಗಳ ಗುಣಕಥನಗಳು ಅದರ ಕಾರಣಕಾರ್ಯಗಳನ್ನು ವಿಮರ್ಶಿಸಬೇಕಾದರೆ ಸಮಷ್ಟಿದೃಷ್ಟಿಯಿಂದ ಚ್ಯುತರಾಗಿ ಬಿಡಬಾರದು. ಸಮಸ್ತ ಮಹಾಭಾರತದ ಅಂತರಾಳದಲ್ಲಿ ಗುಪ್ತಗಾಮಿನಿಯಂತೆ ಹರಿಯುತ್ತಿರುವ ಅದೃಷ್ಟಶಕ್ತಿ. ಕೃಷ್ಣನನ್ನು ಹೊರತುಪಡಿಸಿದರೆ ಉಳಿದೆಲ್ಲ ಪಾತ್ರಗಳು ಈ ಪ್ರವಾಹದಲ್ಲಿ ಕೊಚ್ಚಿಹೋದವರೇ ಆಗಿದ್ದು, ಅದರಲ್ಲಿ ಕರ್ಣನೂ ಒಬ್ಬ ಎಂಬುದು ಕುವೆಂಪು ಅವರ ಅಭಿಮತವಾಗಿದೆ.

ಹೆಚ್ಚು ಕಡಿಮೆ ಅವನ ಎಲ್ಲ ಸನ್ನಿವೇಶಗಳಲ್ಲಿ ನೋವುಪಡುವುದಕ್ಕಿಂತ ಹೆಮ್ಮೆಪಡುವುದೇ ಹೆಚ್ಚು. ಆದರೆ ರಣರಂಗದಲ್ಲಿ ಅವನ ಸ್ಥಿತಿ ಸೂರ್ಯನಿಗೆ ಮಗನಾಗಿ, ಕುಂತಿಯ ಪುತ್ರನಾಗಿ, ಪಾಂಡವನಾಗಿ, ಧರ್ಮಜನ ಅಗ್ರಜನಾಗಿ, ಕ್ಷತ್ರಿಯನೆ ಆಗಿ, ವೀರನಾಗಿ, ಕಡೆಯಲ್ಲಿ ಹೀಗಾಯಿತೆ ಎಂದು ಕಂಡಾಗ ಕರುಳು ಕಿತ್ತುಬರುವುದು. ಕುವೆಂಪುರವರ ದೃಷ್ಟಿಯಲ್ಲಿ ಕರ್ಣನ ದುರಂತತೆಗೆ ಮೊದಲು ಕಾರಣ ಕುಂತಿ. ಕನ್ನೆತನದಲ್ಲಿ ಮಾಡಿದ ತಪ್ಪು. ಕರ್ಣನ ಹುಟ್ಟು. ಅದೃಷ್ಟವೆಂದರೆ ಪ್ರವಾಹದ ಮೂಲಕ ಸೂತನ ಬಳಿ ಸೇರಿ ರಾಧೆಯ ಮಗನಾಗಿ ಬೆಳೆದುದು. ಸೂತಭವನದಲ್ಲಿ ಬೆಳೆದ ಶಿಶು ಬಾಲಕನಾಗಿ ಉಪಾಯದಿಂದ ಪರಶುರಾಮರಲ್ಲಿ ಶಸ್ತ್ರಾಭ್ಯಾಸ ಮಾಡಿ ತರುಣನಾಗಿ ಹಸ್ತಿನಾಪುರದ ಶಸ್ತ್ರಪಂಡಿತ ದ್ರೋಣನ ಬಳಿ ತಾನು ಶಸ್ತ್ರ ವಿದ್ಯೆ ಕಲಿತ ವಿಚಾರ ಕುಮಾರವ್ಯಾಸನಲ್ಲಿ ಪ್ರಸ್ತಾಪವಾಗುತ್ತದೆ.

ಕರ್ಣನ ಅವಸಾನಕ್ಕೆ ಕಾರಣ ಬ್ರಾಹ್ಮಣ ಶಾಪ ಎಂಬುದನ್ನು ಕುವೆಂಪು ಒಪ್ಪುವುದಿಲ್ಲ. ಕರ್ಣನು ಸುಳ್ಳು ಹೇಳಿ ಅಸ್ತ್ರವಿದ್ಯೆ ಕಲಿತುದು ಅಧರ್ಮವೆಂದು ವಾದಿಸುವ ತುದಿಯಲ್ಲಿ ಕರ್ಣನಿಗಾದ ಅಪಜಯ ಮರಣ ಅದಕ್ಕೆ ತಕ್ಕ ಪ್ರಾಯಶ್ಚಿತ್ತವೆಂದೂ ಹೇಳುತ್ತಾರೆ. ಆದರೆ ಕರ್ಣನ ಸಾಮರ್ಥ್ಯ, ದ್ರೋಣರ ಶಿಷ್ಯರ ಶಸ್ತ್ರ ಪರೀಕ್ಷೆಯಲ್ಲಿ ಕರ್ಣನ ದರ್ಶನ, ಅರ್ಜುನನ ಶಸ್ತ್ರಪರೀಕ್ಷೆಯಲ್ಲಿ ಜನರಿಂದ ಆತನ ಗುಣಗಾನ, ಕರ್ಣ ಅರ್ಜುನನೊಡನೆ ಕಾಳಗಕ್ಕಿಳಿದು ಸ್ವಸಾಮರ್ಥ್ಯದಿಂದ ಹೋರಾಡಿದುದು, ಜಾತಿಯ ಕಾರಣ, ಕುಂತಿ ಎಲ್ಲಿಯೂ ನಿಜ ಹೇಳದೇ ಕರ್ಣನಿಗೆ ಮಾಡಿದ ಅನ್ಯಾಯ. ಇವುಗಳೆಲ್ಲವು ಮುಂದೆ ಅದೇ ಕರ್ಣ ದುರ್ಯೋಧನರ ಸ್ನೇಹಕ್ಕೆ ನಾಂದಿಯಾಗುತ್ತದೆ. ಸೂತಪುತ್ರನು ಕ್ಷತ್ರಿಯ ರಾಜನಾಗಿ ಮುಂದೆ ಕೌರವನ ಯಶಸ್ಸೇ ತಾನಾಗುತ್ತಾನೆ. ಆದರೆ ಕರ್ಣನು ಶ್ರೀಕೃಷ್ಣನ ಭೇದೋಪಾಯಕ್ಕೆ ಸಿಲುಕುತ್ತಾನೆ. ಶಲ್ಯ ಕರ್ಣಪರ್ವದಲ್ಲಿ ಕರ್ಣನ ಸಾರಥಿಯಾಗುವುದು ಅವಮಾನಕರವೆಂದು ಭಾವಿಸುತ್ತಾನೆ.

ಒಟ್ಟಾರೆಯಾಗಿ ಕುಮಾರವ್ಯಾಸ ರಚಿತದ ಕರ್ಣನ ದುರಂತದ ಕೊನೆಯ ದೃಶ್ಯವನ್ನು ಕುವೆಂಪುರವರು ಹೃದಯ ವಿದ್ರಾವಕ ಎಂದು ಕರೆದಿರುವುದು ಸರ್ವರೂ ಒಪ್ಪುವ ಮಾತೇ ಸರಿ. ಒಬ್ಬ ತಾಯಿಯ ಎರಡು ಮಕ್ಕಳು ವಿಚಿತ್ರ ಘಟನಾಕ್ರಮದಲ್ಲಿ ಸಿಕ್ಕಿ ಬೇರೆ ಬೇರೆ ಪಥಗಳಲ್ಲಿ ಸಂಚರಿಸಿ ರಣರಂಗದಲ್ಲಿ ಮುಖಾಮುಖಿಯಾಗುವುದು ದುರಂತವೇ. ಕರ್ಣ ತನ್ನ ಸಾವು ಹತ್ತಿರವಾದಂತೆ ಆತ ತನ್ನ ಅಪಜಯಕ್ಕೆ ಮರುಗದೇ ತನ್ನ ಮಿತ್ರ ಸ್ವಾಮಿಯ ಕೇಡಿಗೆ ಆತ ಮರುಗುವುದನ್ನು ನೆನೆದರೆ ಸಂಕಟವಾಗುತ್ತದೆ. ಹಾರುವನಾಗಿ ಕಲಶ ದಾನ ಪಡೆದು ಅವನ ದುರಂತತೆಗೆ ಕಾರಣವಾಗುವುದು ಹೀನ ಕಾರ್ಯವೇ ಆಗಿದೆ. ಒಟ್ಟಾರೆಯಾಗಿ ಮಹಾಭಾರತ ಕಾವ್ಯದಲ್ಲಿ ಕರ್ಣ ಒಂದು ಮೇರು ವ್ಯಕ್ತಿತ್ವ. ಹಾಗಾಗಿ ಪಾಶ್ಚಾತ್ಯರ ಸಾಹಿತ್ಯ ಪರಿಕಲ್ಪನೆಯ ದುರಂತ ನಾಯಕನನ್ನು ಭಾರತೀಯ ಪರಂಪರೆಯಲ್ಲಿ ನಾವು ಮಹಾಭಾರತದ ಕರ್ಣನಲ್ಲಿ ಕಾಣಬಹುದು.

## ಉಲ್ಲೇಖ ಗ್ರಂಥಸೂಚಿ


1. ಎಂ.ಎಸ್. ಆಶಾದೇವಿ, ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಸಂ: ರಹಮತ್ ತರೀಕೆರೆ. ಕನ್ನಡ ವಿಶ್ವ ವಿದ್ಯಾಲಯ, ಹಂಪಿ
2. ಕುವೆಂಪು, ದ್ರೌಪದಿಯ ಶ್ರೀಮುಡಿ ವಿಮರ್ಶೆಯ ದಾರಿ, ಪ್ರಸಾರಾಂಗ, ಜ್ಞಾನಭಾರತಿ ಬೆಂಗಳೂರು.
3. ಕಾವ್ಯ ವಿಹಾರ. ಕುಮಾರವ್ಯಾಸನ ದುರಂತ ಕರ್ಣ– ಕುವೆಂಪು, ಉದಯರವಿ ಪ್ರಕಾಶನ, ಮೈಸೂರು–1955
4. ಶಂಬಾಜೋಶಿ, ಶಂಬಾಕೃತಿ ಸಂಪುಟ (ಸಂಸ್ಕೃತಿ ಸಾಹಿತ್ಯ)ಸಂ – ಮಲ್ಲೇಪುರಂ ಜಿ ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
5. ಕುಮಾರವ್ಯಾಸ ಒಂದು ಅಧ್ಯಯನ. ಬೋರೇಗೌಡ ಚಿಕ್ಕಮರಳಿ. ಮೈಸೂರು ವಿ.ವಿ. 1998
6. ಹೆಗಡೆ ಎಲ್.ಆರ್. ಕುಮಾರವ್ಯಾಸನ ಪಾತ್ರ ಸೃಷ್ಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. 1978,
7. ಎಚ್.ಎಸ್. ರಾಘವೇಂದ್ರ ರಾವ್, ಕುಮಾರವ್ಯಾಸ ಭಾರತ ಇತರ ಪಾತ್ರಗಳು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–04–ಬೆಂಗಳೂರು ವಿಶ್ವವಿದ್ಯಾಲಯ,
8. ಜವಳಿ ಬಿ.ಸಿ. ಕುಮಾರವ್ಯಾಸ ಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. 1991,
9. ಕೋಕಿಲ ಪಿ. ಜನಪದ ಮಹಾಭಾರತ, ಪಂಪಭಾರತ ಮತ್ತು ಕುಮಾರವ್ಯಾಸ ಭಾರತ ಒಂದು ತೌಲನಿಕ ಅಧ್ಯಯನ ಕನ್ನಡ ವಿ.ವಿ. 2013
10. ಪಂಪಭಾರತ ಮತ್ತು ಕುಮಾರವ್ಯಾಸ ಭಾರತದಲ್ಲಿ ಕರ್ಣಪರ್ವ: ಒಂದು ತೌಲನಿಕ ಅಧ್ಯಯನ ಉಸ್ಮಾನಿಯಾ ವಿ.ವಿ. 1996.